

بِسْمِ اللّٰہِ الرَّحْمٰنِ الرَّحِیْمِ

# ನಮಾಝ್‌ನ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **29–09–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ಅಲ್ಲಾಹನ ಅನುಗ್ರಹದಿಂದ ಯು.ಕೆ.ಯ ಮಜ್ಲಿಸ್ ಅನ್‌ಸಾರುಲ್ಲಾಹ್ ವಾರ್ಷಿಕ ಇಜ್ತಿಮಾ ಪ್ರಾರಂಭವಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಒಂದು ಅತ್ಯಂತ ಮಹತ್ವಪೂರ್ಣವೂ ಮೂಲಭೂತ ಆಧಾರವೂ ಆಗಿರುವ ವಿಷಯದ ಕಡೆಗೆ ಅನ್‌ಸಾರ್‌ಗಳ ಗಮನ ಹರಿಸಲು ಇಚ್ಛಿಸುತ್ತೇನೆ. ಅದು ನಮಾಝ್ ಆಗಿದೆ. ನಮಾಝ್ ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ಫರ್ಝ್ (ಕಡ್ಡಾಯ ಕರ್ತವ್ಯ) ಆಗಿದೆ. ಆದರೆ ನಲ್ವತ್ತು ವರ್ಷಗಳ ಪ್ರಾಯದ ನಂತರ ನಮಾಝ್ ಬಗ್ಗೆ ಪ್ರಜ್ಞೆ ಅದರ ಮೊದಲಿಗಿಂತ ಹೆಚ್ಚಾಗಿ ಇರಬೇಕಾಗಿದೆ. ಪ್ರತಿ ದಿನ ದಾಟಿ ಹೋಗುವಾಗ ನನ್ನ ಜೀವಿತದ ದಿನಗಳು ಕಡಿಮೆಯಾಗುತ್ತಾ ಹೋಗುತ್ತಿವೆ ಎಂದೂ ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನ ಆರಾಧನೆ ಮತ್ತು ನಮಾಝ್ ಬಗ್ಗೆ ಹೆಚ್ಚು ಲಕ್ಷ್ಯ ನೀಡಬೇಕೆಂದೂ, ಸಮಯ ವೇಗವಾಗಿ ದಾಟಿಹೋಗುತ್ತಿದೆ ನಾನು ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿಕ್ಕಿದೆ ಅಲ್ಲಿ ನನ್ನ ಪ್ರತಿಯೊಂದು ಕರ್ಮದ ಬಗ್ಗೆ ಲೆಕ್ಕಾಚಾರ ನಡೆಯಲಿದೆ ಎಂದೂ ಪ್ರಜ್ಞೆ ಹೊಂದಬೇಕಾಗಿದೆ. ಇಂತಹ ಸ್ಥಿತಿಯಲ್ಲಿ ಪ್ರತಿಯೊಬ್ಬ ಸತ್ಯವಿಶ್ವಾಸಿ, ತಾನು ಮೃತನಾದ ನಂತರದ ಪರಲೋಕ ಜೀವಿತದ ಬಗ್ಗೆ ಮತ್ತು ಅಂತಿಮ ವಿಚಾರಣೆಯ ದಿನದ ಬಗ್ಗೆ ವಿಶ್ವಾಸವನ್ನು ಹೊಂದಿದ ಪ್ರತಿಯೊಬ್ಬನು, ಹೀಗೆ ಚಿಂತಿಸಬೇಕಾಗಿದೆ: ನಾವು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವವರಾಗಬೇಕು ಮತ್ತು ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವವರೂ ಆಗಬೇಕು. ನಾವು ಅಲ್ಲಾಹನ ಮುಂದೆ ಹಾಜರಾಗುವಾಗ ನಾವು ಈ ಹಕ್ಕುಗಳನ್ನು ಈಡೇರಿಸಲು ಪ್ರಯತ್ನ ಮಾಡುತ್ತಾ ಇದ್ದವರಾಗಬೇಕು.

ಅಲ್ಲಾಹನು ನಮಾಝ್ ಅನುಷ್ಠಿಸುವ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಆಜ್ಞೆ ನೀಡಿದ ಸ್ಥಳಗಳಲ್ಲೆಲ್ಲಾ ನಮಾಝ್ ಕ್ರಮಬದ್ಧವಾಗಿರಬೇಕೆಂದೂ, ಎಲ್ಲಾ ನಮಾಝ್‌ಗಳನ್ನು ನಿಗದಿತ ಸಮಯಗಳಲ್ಲಿ ಅನುಷ್ಠಿಸಬೇಕೆಂದೂ ಬಾಜಮಾಅತ್ ಅನುಷ್ಠಿಸಬೇಕೆಂದೂ ಹೇಳಿದ್ದಾನೆ. ನಮಾಝುನ್ನು ನೆಲೆನಿಲ್ಲಿಸಬೇಕೆಂಬ ಆಜ್ಞೆ ನೀಡಲಾಗಿದೆ. ನಮಾಝುನ್ನು ನೆಲೆನಿಲ್ಲಿಸಬೇಕು ಎಂಬ ಆಜ್ಞೆಯ ಅರ್ಥ ನಮಾಝುನ್ನು ನಿಗದಿತ ಸಮಯದಲ್ಲಿ ಬಾಜಮಾಅತ್ ಆಗಿ ನಿರ್ವಹಿಸಬೇಕೆಂದಾಗಿದೆ.

ಆದರೆ ಈಗ ಕಂಡುಬರುವುದು, ಅನ್‌ಸಾರ್‌ಗಳು ಪಕ್ವವಾದ ಪ್ರಾಯ ಹೊಂದಿದವರೂ ತಿಳುವಳಿಕೆಯುಳ್ಳವರೂ ಆಗಿದ್ದರೂ ಬಾಜಮಾಅತ್ ನಮಾಝ್ ಬಗ್ಗೆ ಎಷ್ಟು ಶ್ರದ್ಧೆ ನೀಡಬೇಕೋ ಅಷ್ಟು ಶ್ರದ್ಧೆ ನೀಡುವುದಿಲ್ಲ. ಅನ್‌ಸಾರುಲ್ಲಾಹ್ ಸದಸ್ಯರು ಈ ವಿಷಯದ ಬಗ್ಗೆ ಎಲ್ಲರಿಗಿಂತಲೂ ಹೆಚ್ಚಾಗಿ ಲಕ್ಷ್ಯ ನೀಡಬೇಕಾಗಿದೆ. ಅನ್‌ಸಾರುಲ್ಲಾದ ಪ್ರತಿಯೊಬ್ಬ ಸದಸ್ಯ ಬಾಜಮಾಅತ್ ನಮಾಝ್ ಮಾಡುವ ಅಭ್ಯಾಸ ಹೊಂದಿದವನಾಗಬೇಕು. ಪ್ರತಿಯೊಬ್ಬ ನಾಸಿರ್ (ಅನ್‌ಸಾರುಲ್ಲಾಹ್ ಸದಸ್ಯ) ತಾನು ಬಾಜಮಾಅತ್ ನಮಾಝ್ ನಿರ್ವಹಿಸುತ್ತಿರುವೆನೋ ಇಲ್ಲವೋ ಎಂದು ಪರಿಶೋಧಿಸಬೇಕು ಮತ್ತು ಅದರ ಬಗ್ಗೆ ಪ್ರಯತ್ನಿಸುವವನಾಗಬೇಕು. ರೋಗ ಬಾಧಿತನಾಗಿರುವಾಗ ಮತ್ತು ನಿರ್ಬಂಧಿತ ಸ್ಥಿತಿಯಲ್ಲಿ ಹೊರತು ಯಾವಾಗಲೂ ಬಾಜಮಾಅತ್ ನಮಾಝ್ ನಿರ್ವಹಿಸಲು ಅತ್ಯಂತ ಹೆಚ್ಚು ಪ್ರಯತ್ನ ಮಾಡಬೇಕು. ಸಮೀಪದಲ್ಲಿ ಮಸ್‌ಜಿದ್ ಅಥವಾ ನಮಾಝ್ ಸೆಂಟರ್ ಇಲದಿದ್ದರೆ ಆ ಪ್ರದೇಶದ ಜನರು ಯಾವುದಾದರೂ ಮನೆಯಲ್ಲಿ ಜಮಾಯಿಸಿ ನಮಾಝ್ ಬಾಜಮಾಅತಾಗಿ ನಿರ್ವಹಿಸಬಹುದು. ಈ ಸೌಲಭ್ಯ ಸಹ ಇಲ್ಲವಾದರೆ ಮನೆಯಲ್ಲಿರುವವರು ಒಟ್ಟಿಗೆ ಸೇರಿ ಬಾಜಮಾಅತ್ ನಮಾಝ್ ನಿರ್ವಹಿಸಬೇಕು. ಹೀಗೆ ಮಾಡಿದರೆ ಮಕ್ಕಳಿಗೂ ಯುವಜನರಿಗೂ ನಮಾಝ್ ಬಗ್ಗೆ ಹಾಗೂ ಬಾಜಮಾಅತ್ ನಮಾಝ್ ನಿರ್ವಹಿಸುವ ಬಗ್ಗೆ ಪ್ರಜ್ಞೆ ಉಂಟಾಗುವುದು.

ಅನ್‌ಸಾರುಲ್ಲಾಹ್ ಸದಸ್ಯರು ವಾಸ್ತವಿಕವಾಗಿ ಅನ್‌ಸಾರುಲ್ಲಾಹ್ (ಅಲ್ಲಾಹನ ಸಹಾಯಕರು) ಆಗುವುದು, ಅಲ್ಲಾಹನ ಧರ್ಮವನ್ನು ನೆಲೆನಿಲ್ಲಿಸುವವರೂ ಅದರ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡುವವರೂ ಮಾಡಿಸುವವರೂ ಆಗಿ ವರ್ತಿಸುವಾಗ ಮಾತ್ರವಾಗಿದೆ. ಓರ್ವ ಅನ್‌ಸಾರ್, ಮನುಷ್ಯನ ಸೃಷ್ಟಿಯ ಉದ್ದೇಶವಾದ ಆರಾಧನೆ ನಿರ್ವಹಿಸುವುದಿಲ್ಲವಾದರೆ, ಯಾರ ಮೇಲೆ ಮೇಲ್ವಿಚಾರಕರಾಗಿ ನಿಶ್ಚಯಿಸಲಾಗಿದೆಯೋ ಅವರ ಮೇಲ್ವಿಚಾರಣೆ ನಡೆಸುವುದಿಲ್ಲವಾದರೆ ಅವರು ಅನುಷ್ಠಾನ ಕರ್ಮಗಳನ್ನು ಮಾಡುವಂತೆ ಮಾಡುವುದಿಲ್ಲವಾದರೆ ಅಥವಾ ಅದಕ್ಕೆ ಪ್ರಯತ್ನ ಮಾಡುವುದಿಲ್ಲವಾದರೆ ಮತ್ತು ತಮ್ಮ ಮಾದರಿಯನ್ನು ತೋರಿಸುವುದಿಲ್ಲವಾದರೆ ಅಂತಹ ಜನರು ಕೇವಲ ಹೆಸರಿಗೆ ಮಾತ್ರ ಅನ್‌ಸಾರುಲ್ಲಾಹ್ ಆಗಿರುತ್ತಾರೆ. ಈಗ ಖಡ್ಗಗಳ ಮತ್ತು ಬಾಣಗಳ ಯುದ್ಧ ನಡೆಯುತ್ತಾ ಇಲ್ಲ. ಅಂತಹ ಸಹಾಯಕರ ಆವಶ್ಯಕತೆಯೂ ಇಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವುದೇನೆಂದರೆ ನಾವು ಜಯಶಾಲಿಯಾಗಲು ನಮಗಿರುವ ಆಯುಧ ಪ್ರಾರ್ಥನೆಯಾಗಿದೆ. ಅನ್‌ಸಾರುಲ್ಲಾಹ್ ಆಗಲು ದುಆ ಎಂಬ ಆಯುಧವನ್ನು ಉಪಯೋಗಿಸಬೇಕಾಗಿದೆ. ಆದುದರಿಂದ ಅಲ್ಲಾಹನು ಹೇಳಿರುವ ರೀತಿಯಲ್ಲಿ ಈ ಆಯುಧವನ್ನು ಬಳಸಬೇಕಾದ ಆವಶ್ಯಕತೆ ಇದೆ. ಹೀಗೆ ಮಾಡುವವರಾದರೆ ಮಾತ್ರ ನಾವು ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ನಮ್ಮ ಹೊಣೆಗಾರಿಕೆಯನ್ನು ಈಡೇರಿಸುವವರಾಗುವೆವು. ಹೀಗೆ ಮಾಡದವರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಹೇಳಿದ್ದಾರೆ: ನನ್ನ ಮಾತುಗಳನ್ನು ಅಂಗೀಕರಿಸುವುದಿಲ್ಲವಾದರೆ, ನಿಮ್ಮೊಳಗೆ ಪರಿಶುದ್ಧ ಪರಿವರ್ತನೆಗಳನ್ನು ಉಂಟುಮಾಡುವುದಿಲ್ಲವಾದರೆ, ನೀವು ಆರಾಧನೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವುದಿಲ್ಲವಾದರೆ, ನನ್ನನ್ನು ಬೈಅತ್ ಮಾಡಿದುದರ ಯಾವ ಪ್ರಯೋಜನವೂ ನಿಮಗೆ ಲಭಿಸಲಾರದು. ಆದುದರಿಂದ ಪ್ರತಿಯೊಬ್ಬ ಅನ್‌ಸಾರುಲ್ಲಾಹ್ ಸದಸ್ಯ ತನ್ನನ್ನು ವಿಶಿಷ್ಟವಾಗಿ ಪರಿಶೋಧಿಸಬೇಕಾಗಿದೆ– ಅವನು ಎಷ್ಟರ ಮಟ್ಟಿಗೆ ನಮಾಝ್ ಬಗ್ಗೆ ಬದ್ಧನಾಗಿದ್ದಾನೆಂದು. ಎಷ್ಟರ ಮಟ್ಟಿಗೆ ತನ್ನ ಉತ್ತಮ ಉದಾಹರಣೆಯನ್ನು ತನ್ನ ಮಕ್ಕಳ ಮುಂದೆ ಇರಿಸಿದ್ದಾನೆಂದು. ಅವನ ನಮಾಝಿನ ಸ್ಥಿತಿ ಹೇಗಿದೆ ಎಂದೂ ನಮಾಝನ್ನು ಭಾರವೆಂದು ಭಾವಿಸಿ ನಿರ್ವಹಿಸಲಾಗುತ್ತಿದೆಯೋ ಅಥವಾ ವಾಸ್ತವಿಕವಾಗಿ ಅಲ್ಲಾಹನ ಸಂಪ್ರೀತಿ ಗಳಿಸಲು ಇವುಗಳನ್ನೆಲ್ಲಾ ನಾವು ಮಾಡುತ್ತಿದ್ದೇವೋ ಎಂದು ಸಹ ಪರಿಶೋಧಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಾಝ್‌ಗಳ ಮಹತ್ವ, ಅವುಗಳು ಫರ್ಝ್ ಆಗಿರುವ ಕಾರಣ, ಅವುಗಳ ಜಾಣ್ಮೆ, ನಮಾಝ್ ಅನುಷ್ಠಿಸುವ ರೀತಿ, ಅದರ ಉದ್ದೇಶ, ಅದರ ತತ್ವಶಾಸ್ತ್ರ, ನಮಾಝ್‌ಗಳ ನಿಗದಿತ ಸಮಯಗಳ ಬಗ್ಗೆ ತತ್ವ ನಿರೂಪಣೆ, ಮೊದಲಾದ ವಿಷಯಗಳಿಗೆ ಸಂಬಂಧಿಸಿ ವಿವಿಧ ರೀತಿಗಳಲ್ಲಿ ಪದೇ ಪದೇ ವಿವಿಧ ಸಂದರ್ಭಗಳಲ್ಲಿ ನಮ್ಮ ಗಮನವನ್ನು ಸೆಳೆದಿದ್ದಾರೆ. ನಮಾಝ್‌ಗಳ ಮಹತ್ವ ಮತ್ತು ಉದ್ದೇಶಲಕ್ಷ್ಯಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಕೆಲವು ಉದ್ಧರಣೆಗಳನ್ನು ಈಗ ನಾನು ನಿಮ್ಮ ಮುಂದೆ ಇರಿಸುವೆನು.

ನಮಾಝನ್ನು ಕ್ರಮಬದ್ಧವಾಗಿಯೂ ಕಡ್ಡಾಯವಾಗಿಯೂ ಅನುಷ್ಠಿಸುವ ಬಗ್ಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝನ್ನು ಕ್ರಮಬದ್ಧವಾಗಿಯೂ ಕಡ್ಡಾಯವಾಗಿಯೂ ಅನುಷ್ಠಿಸಿರಿ. ಕೆಲವರು ಒಂದು ದಿನ ಒಂದು ಸಮಯದ ನಮಾಝ್ ಮಾತ್ರ ಅನುಷ್ಠಿಸುತ್ತಾರೆ. ಅಂತಹ ಜನರು ನೆನಪಿಟ್ಟುಕೊಳ್ಳಲಿ, ನಮಾಝ್‌ಗಳಿಗೆ ಯಾವುದೇ ವಿನಾಯತಿಯಿಲ್ಲ. ಪ್ರವಾದಿಗಳಿಗೆ ಸಹ ಅಂತಹ ಕ್ಷಮೆ ಲಭಿಸಿಲ್ಲ. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೊಸದಾಗಿ ಮುಸ್ಲಿಮರಾದ ಒಂದು ಗುಂಪು ಆಗಮಿಸಿ ನಮಾಝ್ ಅನುಷ್ಠಿಸುವುದರಿಂದ ವಿನಾಯತಿ ಅಪೇಕ್ಷಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾವ ಧರ್ಮದಲ್ಲಿ ಅನುಷ್ಠಾನ ಕರ್ಮಗಳಿಲ್ಲವೋ ಆ ಧರ್ಮವೇ ನಿರರ್ಥಕವಾಗಿದೆ. ಆದುದರಿಂದ ಅಲ್ಲಾಹನ ಆಜ್ಞೆಗಳ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡಿರಿ.

ನಮಾಝ್, ಅದರ ವಾಸ್ತವಿಕತೆ, ಅದರ ಮಹತ್ವ, ಅದರ ಆವಶ್ಯಕತೆ ಅದು ಹೇಗಿರಬೇಕು ಮೊದಲಾದುವುಗಳ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೇಳಿದರು: ನಮಾಝ್ ಎಂದರೇನು? ಅದೊಂದು ವಿಶಿಷ್ಟ ಪ್ರಾರ್ಥನೆಯಾಗಿದೆ. ಆದರೆ ಜನರು ಅದನ್ನು ಸರಕಾರದ ತೆರಿಗೆ ಎಂದು ಭಾವಿಸುತ್ತಾರೆ. ಅಲ್ಲಾಹನಿಗೆ ಇಂತಹವುಗಳ ಆವಶ್ಯಕತೆ ಏನಿದೆ ಎಂದು ಈ ಅವಿವೇಕಿಗಳು ಚಿಂತಿಸುವುದಿಲ್ಲ. ಅಲ್ಲಾಹನು ಯಾವುದೇ ಆವಶ್ಯಕತೆ ಇಲ್ಲದವನೂ ನಿರಾವಲಂಬಿಯೂ ಆಗಿರುವಾಗ ಮನುಷ್ಯನು ದುಆ, ತಸ್‌ಬೀಹ್, ತಹ್‌ಲೀಲ್‌ಗಳಲ್ಲಿ ಮಗ್ನನಾಗಿರಬೇಕೆಂಬ ಆವಶ್ಯಕತೆ ಅಲ್ಲಾಹನಿಗಿಲ್ಲ. ಅವುಗಳನ್ನು ಮಾಡುವುದರಿಂದ ಮನುಷ್ಯನಿಗೆ ಸ್ವತಃ ಲಾಭದ ಮೇಲೆ ಲಾಭ ದೊರಕುವುದು. ಅವನು ಆ ಮೂಲಕ ತನ್ನ ಉದ್ದೇಶ ಲಕ್ಷ್ಯವನ್ನು ತಲಪುತ್ತಾನೆ. ಇಂದಿನ ಕಾಲದಲ್ಲಿ ಆರಾಧನೆ, ತಖ್ವ ಮತ್ತು ಧಾರ್ಮಿಕತೆ ಬಗ್ಗೆ ಜನರಿಗೆ ಪ್ರೀತಿ ಇಲ್ಲ ಎಂದು ನೋಡುವಾಗ ನನಗೆ ಖೇದಕರವಾಗುತ್ತದೆ. ಆರಾಧನೆಯಿಂದ ಯಾವ ರಸಾನುಭೂತಿ ಸಿಗಬೇಕಾಗಿದೆಯೋ ಅದು ಸಿಗುವುದಿಲ್ಲ. ಅಲ್ಲಾಹನು ಯಾವುದಾದರೂ ರೀತಿಯ ರಸಾನುಭೂತಿಯನ್ನು ಇರಿಸದ ಯಾವ ವಸ್ತುವೂ ಲೋಕದಲ್ಲಿ ಇಲ್ಲ. ಅಲ್ಲಾಹನು ಮನುಷ್ಯನನ್ನು ಆರಾಧನೆಗೋಸ್ಕರವೇ ಸೃಷ್ಟಿಸಿರುವಾಗ ಆರಾಧನೆಯಿಂದ ರಸಾನುಭೂತಿ ಸಿಗದಿರಲು ಕಾರಣವೇನು? ಮನುಷ್ಯನನ್ನು ಆರಾಧನೆಗೋಸ್ಕರವೇ ಅಲ್ಲಾಹನು ಸೃಷ್ಟಿಸಿರುವಾಗ ಅದರಲ್ಲಿ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ರಸಾನುಭೂತಿ ಮತ್ತು ಸಂತೋಷವನ್ನು ಇರಿಸಿರುವುದು ಆವಶ್ಯಕವಾಗಿದೆ. ಆರಾಧನೆಯಲ್ಲಿ ಅತ್ಯುತ್ತಮ ಮಟ್ಟದ ರಸಾನುಭೂತಿ ಮತ್ತು ಸಂತೋಷವಿರಬೇಕಾಗಿದೆ. ಅದು ಇಲ್ಲವಾದರೆ ಮತ್ತು ಅಲ್ಲಾಹನು ಕೇವಲ ಸೃಷ್ಟಿಸಿದ್ದಾನೆ ಅದಕ್ಕೆ ಉದ್ದೇಶವಿಲ್ಲ ಎಂದಾದರೆ, ಅದರಿಂದ ಲಾಭವಿಲ್ಲವಾದರೆ, ಅದರಿಂದ ಸಂತೋಷ ಸಿಗುವುದಿಲ್ಲವಾದರೆ, ಮನುಷ್ಯನು ಆ ಕೆಲಸವನ್ನು ಹೇಗೆ ತಾನೆ ಮಾಡಬಲ್ಲನು. ಉದಾಹರಣೆಗೆ ನೋಡಿರಿ, ಧಾನ್ಯಗಳು ಮತ್ತು ತಿನ್ನುವ ಇತರ ವಸ್ತುಗಳು ಮನುಷ್ಯರಿಗೋಸ್ಕರ ಸೃಷ್ಟಿಸಲ್ಪಟ್ಟಿವೆ. ಅವುಗಳಿಂದ ಮನುಷ್ಯನು ಒಂದು ರುಚಿಯನ್ನು ಪಡೆಯುವುದಿಲ್ಲವೇ? ಅವುಗಳ ರುಚಿ ಅನುಭವಿಸಲು ಮನುಷ್ಯನ ಬಾಯಿಯಲ್ಲಿ ನಾಲಗೆ ಇಲ್ಲವೇ? ಆದುದರಿಂದ ನೀವು ಚೆನ್ನಾಗಿ ಮನವರಿಕೆ ಮಾಡಿರಿ, ಆರಾಧನೆ ಸಹ ಒಂದು ಭಾರವಲ್ಲ. ಅದೊಂದು ಟ್ಯಾಕ್ಸ್ ಅಲ್ಲ. ಅದರಲ್ಲಿ ಸಹ ಒಂದು ರುಚಿ ಮತ್ತು ಸಂತೋಷ ಇದೆ. ಆರಾಧನೆಯಿಂದ ದೊರಕುವ ರಸಾನುಭೂತಿ ಮತ್ತು ಸಂತೋಷವು ಲೋಕದ ಎಲ್ಲ ರಸಾನುಭೂತಿಗಳಿಗಿಂತ, ಇಂದ್ರಿಯಾನುಭೂತಿಗಳಿಗಿಂತ ಅತ್ಯಂತ ಉನ್ನತ ಮಟ್ಟದ್ದಾಗಿದೆ. ಒಬ್ಬ ರೋಗಿ ಅತ್ಯುತ್ತಮವಾದ ರುಚಿಯುಳ್ಳ ಆಹಾರ ಪದಾರ್ಥದ ರುಚಿಯನ್ನು ಸಹ ಅನುಭವಿಸಲಾರನು. ಅದೇ ರೀತಿ ದುರದೃಷ್ಟಶಾಲಿಯಾದ ಮನುಷ್ಯನು ಆರಾಧನೆಯಿಂದ ರಸಾನುಭೂತಿ ಗಳಿಸುವುದಿಲ್ಲ. ಆದುದರಿಂದ ನಮ್ಮವರಲ್ಲಿ ಯಾರಾದರೂ ಈ ರೀತಿಯಲ್ಲಿದ್ದರೆ ಅವರು ತಮ್ಮ ಬಗ್ಗೆ ಚಿಂತಾಕುಲರಾಗಬೇಕಾಗಿದೆ.

ನೈಜ ನಮಾಝ್ ಹೇಗಿರಬೇಕು ಎಂಬುದರ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಟ್ಟುಕೊಳ್ಳಿರಿ, ನಮಾಝ್ ಎಂತಹ ವಸ್ತುವೆಂದರೆ ಅದರಿಂದ ಲೌಕಿಕ ಸ್ಥಿತಿಯೂ ಧಾರ್ಮಿಕ ಸ್ಥಿತಿಯೂ ಸರಿಪಡಿಸಲ್ಪಡುತ್ತದೆ. ಆದರೆ ಬಹುತೇಕ ಜನರು ಎಂತಹ ನಮಾಝ್ ನಿರ್ವಹಿಸುತ್ತಾರೆಂದರೆ ಆ ನಮಾಝ್ ಅವರ ಮೇಲೆ ಶಾಪ ಹಾಕುತ್ತದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: **ಫ ವಯ್‌ಲುನ್ ಲಿಲ್ ಮುಸಲ್ಲೀನಲ್ಲದೀನಹುಮ್ ಅನ್ ಸಲಾತಿಹಿಮ್ ಸಾಹೂನ್.** ತಮ್ಮ ಪ್ರಾರ್ಥನೆಯ ಬಗ್ಗೆ ಶ್ರದ್ಧೆ ಇಲ್ಲದೆ ಪ್ರಾರ್ಥಿಸುವವರಿಗೆ ವಿನಾಶ (ಪವಿತ್ರ ಖುರ್‌ಆನ್ 107:5,6). ನಮಾಝ್ ಎಂತಹ ವಸ್ತುವೆಂದರೆ ಮನುಷ್ಯನು ನಮಾಝನ್ನು ಅನುಷ್ಠಿಸುವುದರಿಂದ ಪ್ರತಿಯೊಂದು ರೀತಿಯ ಕೆಟ್ಟ ಕೆಲಸದಿಂದ ಮತ್ತು ನಿರ್ಲಜ್ಜೆಯಿಂದ ರಕ್ಷಿಸಲ್ಪಡುತ್ತಾನೆ.

ಇಂತಹ ರೀತಿಯ ನಮಾಝನ್ನು ಅನುಷ್ಠಿಸುವುದು ಮನುಷ್ಯನಿಗೆ ಸ್ವತಃ ಸಾಧ್ಯವಿಲ್ಲ. ಅಲ್ಲಾಹನ ಸಹಾಯವನ್ನು ಬೇಡಿಕೊಳ್ಳದೆ ಅದು ಸಾಧ್ಯವಾಗದು. ಮನುಷ್ಯನು ಪ್ರಾರ್ಥನೆಯಲ್ಲಿ ನಿರತನಾಗಿರದಿದ್ದರೆ ಅವನಲ್ಲಿ ದೇವಭಯ ಮತ್ತು ಅಳಲು ತಲೆದೋರಲಾರದು. ನಮಾಝ್‌ನಿಂದ ರಸಾನುಭೂತಿ ಪಡೆಯಲು ಅಲ್ಲಾಹನಿಂದ ಅನುಗ್ರಹವನ್ನು ಬೇಡಿಕೊಳ್ಳುವ ಆವಶ್ಯಕತೆ ಇದೆ. ಅಲ್ಲಾಹನ ಅನುಗ್ರಹ ದೊರಕಲು ಅವನ ಮುಂದೆಯೇ ಬಾಗುವ ಆವಶ್ಯಕತೆ ಇದೆ. ಅತ್ತಿತ್ತ ನಡೆದಾಡುವಾಗಲೂ ದೇವಸ್ಮರಣೆ ಮಾಡುವ ಆವಶ್ಯಕತೆ ಇದೆ. ನಮಾಝ್‌ನಲ್ಲಿ ಹೃತ್ಪೂರ್ವಕತೆ ಉಂಟಾಗಲು ಸಹ ಅಲ್ಲಾಹನಲ್ಲಿ ಬೇಡಿಕೊಳ್ಳಬೇಕಾಗಿದೆ. ಇಂತಹ ಸ್ಥಿತಿ ಮನುಷ್ಯನಲ್ಲಿ ಉಂಟಾದರೆ ನಮಾಝ್‌ನಲ್ಲಿ ರಸಾನುಭೂತಿ ತಲೆದೋರುವುದು.

**ಇನ್ನಲ್ ಹಸನಾತಿ ಯುಝ್‌ಹಿಬ್‌ನಸ್ಸಯ್ಯಿಆತಿ.** ಖಂಡಿತವಾಗಿಯೂ ಸತ್ಕರ್ಮಗಳು ದುಷ್ಕರ್ಮಗಳನ್ನು ಹೋಗಲಾಡಿಸುವುವು. (11:115). ಅಥವಾ ನಮಾಝ್ ದುಷ್ಕರ್ಮಗಳಿಂದ ದೂರ ಸರಿಸುವುದು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಪವಿತ್ರ ಖುರ್‌ಆನಿನಲ್ಲಿ ಇನ್ನೊಂದು ಸ್ಥಳದಲ್ಲಿ ನಮಾಝ್ ಅಶ್ಲೀಲ ಕೃತ್ಯಗಳಿಂದಲೂ ಕೆಡುಕುಗಳಿಂದಲೂ ರಕ್ಷಿಸುತ್ತದೆ ಎಂದು ಸಹ ಹೇಳುತ್ತದೆ. ಆದರೆ ಕೆಲವರು ನಮಾಝ್ ಅನುಷ್ಠಿಸುತ್ತಿದ್ದರೂ ಕೆಟ್ಟ ಕೆಲಸಗಳನ್ನು ಮಾಡುತ್ತಿರುವುದಾಗಿ ನಾವು ಕಾಣುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಅವರು ನಮಾಝ್ ನಿರ್ವಹಿಸುವುದು ನಮಾಝಿನ ಆತ್ಮರಹಿತವಾಗಿ ಮತ್ತು ಸತ್ಯರಹಿತವಾಗಿಯಾಗಿದೆ. ಅವರು ಆಚಾರ ಮತ್ತು ಅಭ್ಯಾಸ ಪ್ರಕಾರ ಅಂಗವಿನ್ಯಾಸ ಮಾತ್ರ ಮಾಡುತ್ತಾರೆ. ಅವರ ಆತ್ಮ ಮೃತವಾಗಿದೆ. ಸತ್ಯದ ಆತ್ಮ ಹೊಂದಿ ನಮಾಝ್ ಮಾಡುವವರ ನಮಾಝ್ ಕೆಡುಕಿನಿಂದ ದೂರ ಸರಿಸುತ್ತದೆ.

ನಮಾಝ್‌ನಲ್ಲಿ ನಿಲ್ಲುವುದು, ಬಾಗುವುದು, ಸಾಷ್ಟಾಂಗ ಪ್ರಣಾಮ ಮಾಡುವುದು, ಕುಳಿತು ಕೊಳ್ಳುವುದು ಮೊದಲಾದುವುಗಳು ಇರುವುದು ನಮಾಝಿನ ಆತ್ಮವನ್ನು ಗಳಿಸಲಿಕ್ಕೋಸ್ಕರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝ್‌ನಲ್ಲಿ ಮಾಡುವುದು ವಾಸ್ತವಿಕವಾಗಿ ಆಧ್ಯಾತ್ಮಿಕ ಕುಳಿತುಕೊಳ್ಳುವಿಕೆ ಮತ್ತು ಎದ್ದೇಳುವಿಕೆ ಆಗಿದೆ. ಮನುಷ್ಯನು ಅಲ್ಲಾಹನ ಮುಂದೆ ನಮಾಝ್‌ಗೋಸ್ಕರ ನಿಲ್ಲುವಾಗ ಆ ನಿಲ್ಲುವಿಕೆ ಸೇವಕನು ಸೇವೆಗೋಸ್ಕರ ನಿಲ್ಲುವ ಸ್ಥಿತಿಯಾಗಿದೆ. ಬಾಗುವಾಗ ಸೇವೆಗೋಸ್ಕರ ಸಿದ್ಧನಾಗಿರುವೆನು ಆಜ್ಞೆಯನ್ನು ಕಾಯುತ್ತಿದ್ದೇನೆ ಎಂದು ತಲೆಬಾಗುತ್ತಾನೆ. ಸಾಷ್ಟಾಂಗ ಪ್ರಣಾಮ ಅತ್ಯಂತ ವಿನಯ ಮತ್ತು ದೈನ್ಯತೆಯ ಸೂಚಕವಾಗಿದೆ. ತಾನು ಏನೂ ಅಲ್ಲ ಎಂದು ಆರಾಧನೆಯ ಉದ್ದೇಶಲಕ್ಷ್ಯವನ್ನು ಸೂಚಿಸುತ್ತದೆ. ಇವುಗಳನ್ನೆಲ್ಲಾ ಅಲ್ಲಾಹನು ಸ್ಮರಣಿಕೆಗಳಾಗಿ ನಿಶ್ಚಯಿಸಿದ್ದಾನೆ. ಶರೀರವನ್ನು ಆಂತರಿಕ ಸ್ಥಿತಿಯೊಂದಿಗೆ ಜೋಡಿಸಲು ಹೀಗೆ ಮಾಡಲಾಗಿದೆ. ಬಾಹ್ಯರೂಪ ಆಂತರಿಕ ಅಥವಾ ಒಳಗಿನ ರೂಪದ ಒಂದು ಪ್ರತಿಬಿಂಬವಾಗಿರಬೇಕು. ಕೇವಲ ಅನುಕರಣೆಗಾರನ ಹಾಗೆ ಅನುಕರಣೆ ಮಾಡಿದರೆ ಸಾಕಾಗಲಾರದು. ಕೈಕಟ್ಟುವುದು, ಬಾಗುವುದು, ಸುಜೂದು ಮಾಡುವುದು, ಕುಳಿತುಕೊಳ್ಳುವುದು ಮೊದಲಾದುವುಗಳನ್ನು ಅನುಕರಣೆಗಾರನ ಹಾಗೆ ಮಾತ್ರ ಮಾಡುವುದಾದರೆ ಮತ್ತು ಅದನ್ನು ಭಾರವಾದ ಹೊರೆಯ ರೂಪದಲ್ಲಿ ಎಸೆದು ಬಿಡುವುದಾದರೆ ಅಂತಹ ನಮಾಝ್‌ನಿಂದ ಏನು ರಸಾನುಭೂತಿ ಸಿಗಲು ಸಾಧ್ಯ? ರಸಾನುಭೂತಿ ಸಿಗುವ ತನಕ ನಮಾಝ್ ವಾಸ್ತವಿಕ ನಮಾಝ್ ಆಗಲು ಹೇಗೆ ತಾನೆ ಸಾಧ್ಯ? ನಮಾಝ್‌ನಲ್ಲಿ ರಸಾನುಭೂತಿ ಸಹ **ಉಬೂದಿಯ್ಯತ್** (ದಾಸತ್ವ) ಮತ್ತು **ರುಬೂಬಿಯ್ಯತ್** (ದೇವತ್ವ) ಇವುಗಳ ಮಧ್ಯೆ ಸಂಬಂಧ ಸ್ಥಾಪಿಸುವುದರಿಂದ ಲಭಿಸುವುದಾಗಿದೆ. ಒಬ್ಬನು ತಾನು ಏನೂ ಅಲ್ಲ ಅಥವಾ ಏನೂ ಅಲ್ಲದ ಹಾಗೆ ವರ್ತಿಸಿ ತನ್ನನ್ನು ಅಲ್ಲಾಹನ ಮುಂದೆ ಅರ್ಪಿಸುವ ತನಕ ಅನುಗ್ರಹದ ಪ್ರತಿಬಿಂಬ ಅವನಿಗೆ ದೊರಕಲಾರದು. ಹಾಗೆ ಅರ್ಪಿಸುವಾಗ ಎಂತಹ ಉನ್ನತ ಮಟ್ಟದ ರಸಾನುಭೂತಿ ಸಿಗುವುದೆಂದರೆ ಅದಕ್ಕಿಂತ ಮಿಗಿಲಾದ ಯಾವುದೇ ಸುಖಾನುಭೂತಿ ಇಲ್ಲ. ಇಂತಹ ಸ್ಥಿತಿಯಲ್ಲಿ ಮನುಷ್ಯನ ಆತ್ಮ ಅಸ್ತಿತ್ವ ರಹಿತವಾಗುತ್ತದೆ. ಆಗ ಅದು ಅಲ್ಲಾಹನ ಕಡೆಗೆ ಒಂದು ಕಾರಂಜಿಯ ಹಾಗೆ ಹರಿಯುತ್ತದೆ ಮತ್ತು ಅಲ್ಲಾಹನ ಹೊರತು ಎಲ್ಲವುಗಳಿಂದ ಸಂಪೂರ್ಣ ಸಂಬಂಧ ವಿಚ್ಛೇದನೆ ಉಂಟಾಗುತ್ತದೆ. ಆಗ ಅಲ್ಲಾಹನ ಪ್ರೀತಿ ಅವರ ಮೇಲೆ ಬೀಳುತ್ತದೆ. ಕೆಳಗಿನಿಂದ ದಾಸತ್ವದ ಹರಿವು ಮತ್ತು ಮೇಲಿನಿಂದ ದೇವತ್ವದ ಹರಿವು ಇವುಗಳು ಸಮ್ಮೇಳಿಸುವಾಗ ಎಂತಹ ಸ್ಥಿತಿ ಉಂಟಾಗುತ್ತದೆ ಎಂದರೆ ಅದರ ಹೆಸರೇ ಸಲಾತ್ (ನಮಾಝ್) ಎಂದಾಗಿದೆ. ಈ ಸಲಾತ್ ಕೆಡುಕುಗಳನ್ನು ಭಸ್ಮವನ್ನಾಗಿ ಮಾಡುತ್ತದೆ ಮತ್ತು ಅದು ಒಂದು ಪ್ರಕಾಶವನ್ನು ಹಾಯಿಸುತ್ತದೆ. ಅದು ಸತ್ಯವಿಶ್ವಾಸಿಗೆ ಮಾರ್ಗದ ಅಪಾಯಗಳ ಮತ್ತು ಕಷ್ಟಗಳ ಸಂದರ್ಭದಲ್ಲಿ ಒಂದು ಪ್ರಕಾಶಮಾನವಾದ ಬೆಳಕಿನ ಕೆಲಸ ಮಾಡುತ್ತದೆ ಮತ್ತು ಮಾರ್ಗದಲ್ಲಿರುವ ಕಸಕಡ್ಡಿಗಳು, ಕಲ್ಲುಮುಳ್ಳುಗಳು ಇವುಗಳ ಬಗ್ಗೆ ತಿಳಿಸಿ ರಕ್ಷಿಸುತ್ತದೆ. ಇದುವೇ ಪವಿತ್ರ ಖುರ್‌ಆನ್ ವಿವರಿಸಿದ **ಇನ್ನಸ್ಸಲಾತ ತನ್‌ಹಾ ಅನಿಲ್ ಫಹ್‌ಶಾಯಿ ವಲ್ ಮುಂಕರಿ.** ನಿಶ್ಚಯವಾಗಿಯೂ ಪ್ರಾರ್ಥನೆ

ಅಸಭ್ಯತೆಯನ್ನೂ ದುರ್ವರ್ತನೆಯನ್ನೂ ತಡೆಯುತ್ತದೆ. (29:46). ಎಂಬ ಸ್ಥಿತಿ ಉಂಟಾಗುತ್ತದೆ. ಏಕೆಂದರೆ ಆಗ ಸತ್ಯವಿಶ್ವಾಸಿಯ ಕೈಯ್ಯಲ್ಲಿ, ಅಲ್ಲ ಅವರ ಹೃದಯದಲ್ಲಿ, ಒಂದು ಪ್ರಕಾಶಮಾನವಾದ ದೀಪವಿರುತ್ತವೆ.

ನಮಾಝ್ ಮಾಡುವಾಗ ವಿವಿಧ ರೀತಿಯ ಯೋಚನೆಗಳು ಬರುವ ಬಗ್ಗೆ ಅದರ ಕಾರಣದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ವಿವರಿಸುತ್ತಾರೆ: ಯಾರಿಗೆ ಅಲ್ಲಾಹನ ಬಗ್ಗೆ ಪೂರ್ಣವಾದ ಶ್ರದ್ಧೆ ಇಲ್ಲವೋ ಅವರಿಗೆ ಮಾತ್ರ ವಿವಿಧ ಯೋಚನೆಗಳು ನಮಾಝ್ ಮಾಡುವಾಗ ಬರುತ್ತವೆ. ನೋಡಿರಿ, ಒಬ್ಬ ಸೆರೆಯಾಳು ನ್ಯಾಯಾಧೀಶನ ಮುಂದೆ ನಿಲ್ಲುವಾಗ ಅವನಿಗೆ ವಿವಿಧ ಯೋಚನೆಗಳು ಬರುತ್ತವೆಯೇ? ಖಂಡಿತ ಇಲ್ಲ. ಅವನು ಪೂರ್ಣವಾಗಿ ನ್ಯಾಯಧೀಶನ ಕಡೆಗೆ ಮಾತ್ರ ಗಮನಿಸುತ್ತಾ ಇರುತ್ತಾನೆ. ನನ್ನ ಬಗ್ಗೆ ನ್ಯಾಯಾಧೀಶ ಯಾವ ಆಜ್ಞೆ ನೀಡುವನು ಎಂಬ ಏಕಮಾತ್ರ ಚಿಂತೆ ಅವನಿಗಿರುತ್ತದೆ. ಇದೇ ರೀತಿ ಮನುಷ್ಯನು ಸತ್ಯ ಹೃದಯದೊಂದಿಗೆ ಅಲ್ಲಾಹನ ಕಡೆಗೆ ತಿರುಗಿದರೆ, ಸತ್ಯ ಹೃದಯದೊಂದಿಗೆ ಅಲ್ಲಾಹನ ಆಸ್ಥಾನದಲ್ಲಿ ಬಿದ್ದಿರುವುದಾದರೆ, ಅವನಿಗೆ ವಿವಿಧ ಚಿಂತೆಗಳು ಉಂಟಾಗುವಂತೆ ಮಾಡಲು ಶೈತಾನನು ಹೇಗೆ ಧೈರ್ಯಗೊಳ್ಳುವನು?

ನಮಾಝನ್ನು ಯಾಕೆ ಸಂರಕ್ಷಿಸಬೇಕು? ನಮಾಝ್ ಅನುಷ್ಠಿಸುವುದು ಯಾಕೆ? ಅಲ್ಲಾಹನಿಗೆ ನಮ್ಮ ನಮಾಝ್‌ಗಳ ಆವಶ್ಯಕತೆ ಏನಿದೆ? ಇತ್ಯಾದಿ ಪ್ರಶ್ನೆಗಳು ಈಗ ಬಹುತೇಕ ಜನರ ಮನಸ್ಸಿನಲ್ಲಿ ಹುಟ್ಟುತ್ತವೆ. ಇಂದಿನ ಕಾಲದ ನಾಸ್ತಿಕವಾದದ ಪ್ರಭಾವದಿಂದ ಇಂತಹ ಪ್ರಶ್ನೆಗಳು ಹುಟ್ಟುತ್ತವೆ. ಈ ವಿಷಯವನ್ನು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಅಲ್ಲಾಹನಿಗೆ ನಮ್ಮ ನಮಾಝ್‌ಗಳ ಯಾವ ಆವಶ್ಯಕತೆಯೂ ಇಲ್ಲ. ಅವನು **ಗನಿಯ್ಯುನ್ ಅನಿಲ್ ಆಲಮೀನ್.** ಸಕಲ ಲೋಕಗಳ ಆಶ್ರಯದ ಆವಶ್ಯಕತೆ ಇಲ್ಲದವನು. ಅವನಿಗೆ ಯಾವುದರ ಆವಶ್ಯಕತೆಯೂ ಇಲ್ಲ. ಆದರೆ ಮನುಷ್ಯನಿಗೆ ನಮಾಝ್‌ನ ಆವಶ್ಯಕತೆಯಿದೆ. ಮನುಷ್ಯನು ಸ್ವತಃ ತನಗೆ ಒಳಿತನ್ನು ಆಶಿಸುತ್ತಾನೆ ಎಂಬುದು ಒಂದು ರಹಸ್ಯವಾಗಿದೆ. ಆದುದರಿಂದ ಅವನು ಅಲ್ಲಾಹನಿಂದ ಸಹಾಯವನ್ನು ಬೇಡಿಕೊಳ್ಳುತ್ತಾನೆ. ಮನುಷ್ಯನು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದು ವಾಸ್ತವಿಕ ಒಳಿತಿನ ಗಳಿಕೆಯೇ ಆಗಿದೆ ಎಂಬುದು ಸತ್ಯವಾಗಿದೆ. ಅಂತಹ ವ್ಯಕ್ತಿಗೆ ಸಕಲ ಲೋಕವು ಶತ್ರುವಾದರೆ ಮತ್ತು ಅವನನ್ನು ನಾಶಮಾಡಲು ಸಿದ್ಧವಾದರೆ ಅದು ಅವನನ್ನು ಯಾವ ರೀತಿಯಲ್ಲಿಯೂ ಬಿಗಡಾಯಿಸಲು ಶಕ್ತವಾಗಲಾರದು. ಅಂತಹ ವ್ಯಕ್ತಿಗೋಸ್ಕರ ಲಕ್ಷಗಟ್ಟಲೆ ಜನರನ್ನು ನಾಶಮಾಡಬೇಕಾಗಿ ಬಂದರೂ ಸಹ ಅಲ್ಲಾಹನು ಆ ರೀತಿ ಮಾಡುವನು. ಒಬ್ಬನಿಗೋಸ್ಕರ ಲಕ್ಷಗಟ್ಟಲೆ ಜನರನ್ನು ಅವನು ನಾಶಮಾಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನೀವು ನಿಮ್ಮ ನಮಾಝ್‌ಗಳನ್ನು ರುಚಿಕರವಾಗಿಯೂ ಆಸಕ್ತಿದಾಯಕವಾಗಿಯೂ ಮಾಡಲು ಇಚ್ಛಿಸುವುದಾದರೆ ನೀವು ನಿಮ್ಮ ಸ್ವಂತ ಭಾಷೆಯಲ್ಲಿ ಏನಾದರೂ ಪ್ರಾರ್ಥನೆ ಮಾಡಿರಿ. ಹೆಚ್ಚಾಗಿ ಕಾಣುವುದೇನೆಂದರೆ ನಮಾಝ್‌ಗಳನ್ನು ಅಂಗವಿನ್ಯಾಸ ಮಾಡಿ ಬೇಗ ಬೇಗನೆ ಮುಗಿಸುತ್ತಾರೆ. ಅನಂತರ ಪ್ರಾರ್ಥನೆ ಮಾಡಲು ಪ್ರಾರಂಭಿಸುತ್ತಾರೆ. ಇದರಿಂದ ತಿಳಿಯುವುದೇನೆಂದರೆ ಇಂತಹ ಜನರು ನಮಾಝನ್ನು ಒಂದು ಅನುಚಿತ ಟ್ಯಾಕ್ಸ್ ಆಗಿ ಪರಿಗಣಿಸುತ್ತಾರೆ ಎಂದು. ಅವರಲ್ಲಿ ಏನಾದರೂ ನಿಷ್ಠೆ ಇದ್ದರೆ ಅದನ್ನು ನಮಾಝ್‌ನ ನಂತರ ಪ್ರಕಟಿಸುತ್ತಾರೆ. ನಮಾಝ್ ಸ್ವತಃ ಒಂದು ಪ್ರಾರ್ಥನೆಯ ಹೆಸರೆಂದು ಅವರಿಗೆ ತಿಳಿದಿಲ್ಲ. ನಮಾಝ್‌ನಲ್ಲಿ ಬಹಳ ವಿನಯದಿಂದಲೂ ದೈನ್ಯತೆಯಿಂದಲೂ ನಿಷ್ಠೆಯಿಂದಲೂ ಅಳಲಿನೊಂದಿಗೆಯೂ ಪ್ರಾರ್ಥಿಸಬೇಕು. ದೊಡ್ಡ ದೊಡ್ಡ ಮಹತ್ವಪೂರ್ಣ ಕೆಲಸಗಳ ಕೀಲಿಗೈ ಕೇವಲ ದುಆ ಮಾತ್ರವಾಗಿದೆ. ಅಲ್ಲಾಹನ ಅನುಗ್ರಹದ ಬಾಗಿಲನ್ನು ತೆರೆಯುವ ಪ್ರಥಮ ಹಂತ ದುಆ ಮಾತ್ರವಾಗಿದೆ.

ನೋಡಿರಿ, ಅಲ್ಲಾಹನಿಗೆ ನಮಾಝ್‌ನಿಂದ ಲಾಭವೇನೂ ಇಲ್ಲ. ಆದರೆ ಸ್ವತಃ ಮನುಷ್ಯನಿಗೆ ಅದರಿಂದ ಒಳಿತುಂಟಾಗುತ್ತದೆ. ಮನುಷ್ಯನಿಗೆ ಅಲ್ಲಾಹನ ಸಾನ್ನಿಧ್ಯಗಳಿಸುವ ಸಂದರ್ಭ ನಮಾಝ್ ಮೂಲಕ ನೀಡಲಾಗುತ್ತಿದೆ. ಬೇಡಿಕೊಳ್ಳಲು ಅನುಮತಿ ನೀಡಲಾಗುತ್ತಿದೆ. ಆ ಮೂಲಕ ಅನೇಕ ಕಷ್ಟಗಳಿಂದ ಅವನಿಗೆ ಮುಕ್ತಿ ದೊರಕುತ್ತದೆ. ನಾನು ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ, ಕೆಲವು ಜನರು ಯಾವ ರೀತಿ ಜೀವಿಸುತ್ತಿದ್ದಾರೆ. ಅವರ ಹಗಲುಗಳು ದಾಟಿಹೋಗುತ್ತವೆ. ರಾತ್ರಿಗಳೂ ದಾಟಿಹೋಗುತ್ತವೆ. ಆದರೆ ಅವರಿಗೊಬ್ಬ ದೇವನಿದ್ದಾನೆಂದು ಅವರು ತಿಳಿದಿಲ್ಲ. ನೆನಪಿಡಿರಿ, ಅಂತಹ ಮನುಷ್ಯನು ಇಂದು ನಾಶವಾಗುವನು. ನಾಳೆಯೂ ನಾಶವಾಗುವನು.

ನಾನೊಂದು ಆವಶ್ಯಕವಾದ ಉಪದೇಶ ನೀಡಲು ಇಚ್ಛಿಸುತ್ತೇನೆ. ಅದು ಜನರ ಹೃದಯಕ್ಕೆ ತಲಪಿದರೆ ಎಷ್ಟು ಚೆನ್ನಾಗಿತ್ತು. ನೋಡಿರಿ, ಆಯುಸ್ಸು ದಾಟಿ ಹೋಗುತ್ತಾ ಇದೆ. ನೀವು ಆಲಸ್ಯವನ್ನು ಬಿಟ್ಟುಬಿಡಿರಿ. ಅಳುತ್ತಾ ಪ್ರಾರ್ಥಿಸಿರಿ. ನೀವು ಏಕಾಂಗಿಯಾಗಿ ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಅಲ್ಲಾಹನು ನಿಮ್ಮ ವಿಶ್ವಾಸವನ್ನು ರಕ್ಷಿಸಿಡಲಿ. ಅವನು ನಿಮ್ಮಿಂದ ಸಂಪ್ರೀತನಾಗಲಿ. ಈಗ ಸಹ ಅಲ್ಲಾಹನ ಕಾರುಣ್ಯದ ಬಾಗಿಲು ಮುಚ್ಚಲ್ಪಟ್ಟಿಲ್ಲ. ನೀವು ಶುದ್ಧವಾದ ಹೃದಯ ಹೊಂದಿರಿ. ನಮಾಝನ್ನು ಸಾವದಾನದಿಂದ ಅನುಷ್ಠಿಸಿರಿ. ಪ್ರಾರ್ಥನೆ ಮಾಡುತ್ತಾ ಇರಿ. ನಮ್ಮ ಉಪದೇಶಗಳ ಪ್ರಕಾರ ವರ್ತಿಸಿರಿ. ನಾವು ಸಹ ನಿಮಗೋಸ್ಕರ ಪ್ರಾರ್ಥಿಸುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಫರ್ಝ್ ನಮಾಝ್‌ಗಳನ್ನು ಅನುಷ್ಠಿಸುವ ಬಗ್ಗೆ ಮಾತ್ರವಲ್ಲ **ತಹಜ್ಜುದ್** ನಮಾಝ್ ಬಗ್ಗೆಯೂ ಒತ್ತಿ ಹೇಳಿದ್ದಾರೆ. ಅನ್‌ಸಾರುಲ್ಲಾಹ್ ಇದರ ಬಗ್ಗೆ ವಿಶಿಷ್ಟವಾಗಿ ಕಡ್ಡಾಯವಾಗಿ ಗಮನ ಹರಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜೀವಿತದ ಎಲ್ಲಾ ಶ್ವಾಸೋಚ್ಛಾಸಗಳು ಲೌಕಿಕ ಕಾರ್ಯಗಳಿಗೆ ಮಾತ್ರ ವಿನಿಯೋಗಿಸಿರುವುದಾದರೆ ಪರಲೋಕಕ್ಕೆ ಸಂಗ್ರಹಿಸಿದ್ದಾದರೂ

ಏನು? ತಹಜ್ಜುದ್ ನಮಾಝ್‌ಗೋಸ್ಕರ ವಿಶಿಷ್ಟವಾಗಿ ಎದ್ದೇಳಿರಿ ಮತ್ತು ಉತ್ಸಾಹಭರಿತರಾಗಿ ಅನುಷ್ಠಿಸಿರಿ. ಮಧ್ಯದ ನಮಾಝ್‌ಗಳಿಗೆ ಸಂಬಂಧಿಸಿ ನೌಕರಿಯ ಪರೀಕ್ಷೆಗಳು ಎದುರಾಗುತ್ತವೆ. ನೀವು ಲೌಕಿಕ ಕೆಲಸಗಳಿಗಾಗಿ ಕಷ್ಟಪಡುತ್ತಿರುವಿರಿ. ಹೀಗಿರುವಾಗ ನಮಾಝ್ ಅನುಷ್ಠಿಸಲಿಕ್ಕಾಗಿ ಸ್ವಲ್ಪ ಕಷ್ಟ ಅನುಭವಿಸಲು ಅಡಚಣೆಯಾದರೂ ಏನಿದೆ.

ನಮಗೆ ಪರಿಪೂರ್ಣವಾದ ವಿಶ್ವಾಸದ ಮಾರ್ಗವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಯಾವುದೇ ಕಷ್ಟವಿಲ್ಲದೆ ತೋರಿಸಿಕೊಡಲಾಗಿದೆ. ಇದು ಅಲ್ಲಾಹನು ನಮಗೆ ನೀಡಿದ ಅಪಾರವಾದ ಅನುಗ್ರಹವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: **ಖುರ್ರತು ಐನೀ ಫಿಸ್ಸಲಾತ್.** (ನನ್ನ ಕಣ್ಣಿಗೆ ತಂಪು ಸಿಗುವುದು ನಮಾಝ್ ಮೂಲಕವಾಗಿದೆ).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೈಜ ತೌಹೀದ್ ಹೇಗೆ ಪೂರ್ಣವಾಗುತ್ತದೆ ಎಂಬುದರ ಬಗ್ಗೆ ಹೀಗೆ ಹೇಳಿದರು: ಎಲ್ಲಾ ಆಶಾಭಿಲಾಷೆಗಳನ್ನು ಈಡೇರಿಸುವವನು, ಎಲ್ಲಾ ರೋಗಗಳನ್ನು ಗುಣಪಡಿಸುವವನು ಏಕದೇವನಾದ ಅಲ್ಲಾಹನು ಎಂದು ನಂಬುವಾಗ ಮಾತ್ರ ನೈಜ ತೌಹೀದ್ ಪೂರ್ಣರೂಪ ಪಡೆಯುತ್ತದೆ. ಮನುಷ್ಯನು ಪರಿಪೂರ್ಣ ತೌಹೀದನ್ನು ಹೊಂದುವ ತನಕ ಅವನಲ್ಲಿ ಇಸ್ಲಾಮ್ ಬಗ್ಗೆ ಪ್ರೀತಿ ಮತ್ತು ಗೌರವ ಭಾವನೆ ಸ್ಥಾಪಿತವಾಗಲಾರದು. ಅವನಿಗೆ ನಮಾಝಿನ ರಸಾನುಭೂತಿ ಮತ್ತು ಸಂತೋಷ ಲಭಿಸಲಾರದು. ಉದ್ದೇಶಲಕ್ಷ್ಯವೇನೆಂದರೆ ಕೆಟ್ಟ ನಿರ್ಧಾರಗಳು, ಕೊಳಕು ಯೋಜನೆಗಳು ಭಸ್ಮೀಕೃತವಾಗುವತನಕ, ಅಹಂಭಾವ ಮತ್ತು ಬಡಾಯಿಕೊಚ್ಚುವುದು ದೂರವಾಗಿ ವಿನಯ ಮತ್ತು ದೈನ್ಯತೆ ಹೊಂದುವ ತನಕ ಅಲ್ಲಾಹನ ಸತ್ಯವಾದ ದಾಸನೆಂದು ಮನುಷ್ಯನು ಕರೆಯಲ್ಪಡಲಾರನು. ಪರಿಪೂರ್ಣವಾದ ದಾಸತ್ವವನ್ನು ಕಲಿಸುವ ಅತ್ಯುತ್ತಮ ಅಧ್ಯಾಪಕ ಮತ್ತು ಅತ್ಯುತ್ತಮ ವಿಚಾರ ನಮಾಝೇ ಆಗಿದೆ. ನಾನು ನಿಮ್ಮೊಂದಿಗೆ ಪುನಃ ಹೇಳುತ್ತೇನೆ, ನೀವು ಅಲ್ಲಾಹನೊಂದಿಗೆ ಸತ್ಯವಾದ ಸಂಬಂಧ ಸ್ಥಾಪಿಸಲು ಇಚ್ಛಿಸುವುದಾದರೆ ನಮಾಝ್‌ಗಳನ್ನು ಅನುಷ್ಠಿಸಿರಿ. ಅದನ್ನು ಹೇಗೆ ಅನುಷ್ಠಿಸಬೇಕೆಂದರೆ ನಿಮ್ಮ ಶರೀರ, ನಿಮ್ಮ ನಾಲಗೆ ಮಾತ್ರವಲ್ಲ ನಿಮ್ಮ ಆತ್ಮದ ನಿರ್ಧಾರಗಳು ಮತ್ತು ಭಾವನೆಗಳು ಎಲ್ಲವೂ ನಮಾಝ್ ಮಾಡುವವುಗಳಾಗಲಿ.

ಅಲ್ಲಾಹನು ನಮ್ಮೆಲ್ಲರನ್ನೂ ನೈಜ ತೌಹೀದಿನಲ್ಲಿ ನೆಲೆ ನಿಲ್ಲುವವರೂ ನಮ್ಮ ನಮಾಝ್‌ಗಳನ್ನು ಸಂರಕ್ಷಿಸುವವರೂ ಸಂತೋಷಭರಿತ ನಮಾಝ್ ಅನುಷ್ಠಿಸುವವರೂ ಆಗುವ ಭಾಗ್ಯ ನೀಡಿ ಅನುಗ್ರಹಿಸಲಿ. ನಾವು ದೇವೇತರನನ್ನು ನಮ್ಮ ಆರಾಧ್ಯರನ್ನಾಗಿ ಮಾಡದೆ ಅಲ್ಲಾಹನನ್ನು ಮಾತ್ರ ನಮ್ಮ ನೈಜ ಆರಾಧ್ಯನನ್ನಾಗಿ ಮಾಡುವವರೂ ಆಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 29-09-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon